ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

**ಶುಕ್ರವಾರ, ದಿನಾಂಕ: ೧೬ನೇ ಸೆಪ್ಟೆಂಬರ್, ೨೦೨೧**

---

**ಸಮೂಹ – V**

೧. ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು

೩. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

೪. ಕೃಷಿ ಸಚಿವರು

೫. ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

೬. ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

---

## ಕೃಷಿ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –

೬೧ (೬೪೮) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷಿ ಇಲಾಖೆಯಲ್ಲಿರುವ ವಿವಿಧ ಯೋಜನೆಗಳಾವುವು; (ವಿವರ ನೀಡುವುದು)

(ಆ) ಈ ಯೋಜನೆಗಳಿಗೆ ಕಳೆದ ೦೩ ವರ್ಷಗಳಿಂದ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು)

(ಈ) ಕಳೆದ ೦೩ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಈ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಎಷ್ಟು; (ಫಲಾನುಭವಿಗಳ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೃಷಿ ಇಲಾಖೆಯ ಯೋಜನೆಗಳು ರೈತರಿಗೆ ತಲುಪಲು ಯಾವ ರೀತಿ ಪ್ರಚಾರ ಮಾಡಲಾಗುತ್ತಿದೆ? (ಮಾಹಿತಿ ನೀಡುವುದು)

## ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಗಳ ಬಗ್ಗೆ

ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) –

೬೨ (೬೮೭) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೯–೨೦೨೦ ಹಾಗೂ ೨೦೨೦–೨೧ನೇ ಸಾಲಿನಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಮೈಕ್ರೋ ಕ್ರೆಡಿಟ್ ಯೋಜನೆ, ನೇರ ಹೈನುಗಾರಿಕೆ ಸಾಲ, ಟ್ಯಾಕ್ಸಿ ಯೋಜನೆಗಳಲ್ಲಿ ಅನುದಾನ ಪಡೆದ ಫಲಾನುಭವಿಗಳ ಸಂಪೂರ್ಣ ಪಟ್ಟಿ ವಿಸ್ತೃತ ಅಂಕಿ–ಅಂಶಗಳೊಂದಿಗೆ ಮಾಹಿತಿ ನೀಡುವುದು;

(ಆ) ಸದರಿ ಯೋಜನೆಗಳಡಿ ಭ್ರಷ್ಟಾಚಾರ ಆರೋಪ ಕೇಳಿ ಬಂದಿದ್ದು ನಿಜವೇ; ಹೌದಾದಲ್ಲಿ, ಎಷ್ಟು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)

## ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆ ಬಗ್ಗೆ

ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –

೬೩ (೭೧೨) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆ (Doubling of Farmers Income - DFI) ಅಡಿಯಲ್ಲಿ ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರದ ಯೋಜನೆಗಳು ಯಾವುವು; (ಈ ಯೋಜನೆಗಳ ರೂಪು– ರೇಷೆಗಳ ಬಗ್ಗೆ ಪೂರ್ಣ ವಿವರ ನೀಡುವುದು)

(ಆ) ರಾಜ್ಯ ಸರ್ಕಾರಕ್ಕೆ ಈ ಯೋಜನೆಗಳ ಅಡಿಯಲ್ಲಿ ದೊರೆಯುವ ಸಹಾಯ ಧನ, ಆರ್ಥಿಕ ನೆರವು ಮತ್ತು ಇತರೆ ಸೌಲಭ್ಯಗಳು ಯಾವ ಯಾವ ಅನುಪಾತದಲ್ಲಿ ಕೇಂದ್ರ ಸರ್ಕಾರದಿಂದ ಲಭ್ಯವಾಗುತ್ತಿದೆ; (ಪೂರ್ಣ ವಿವರ ನೀಡುವುದು)

(ಇ) ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ರೈತರ ಕೃಷಿ ಆದಾಯವನ್ನು ೨೦೨೨ನೇ ಸಾಲಿಗೆ ದ್ವಿಗುಣಗೊಳಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿರ್ಮಿಸಿರುವ ವ್ಯವಸ್ಥೆಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಕೇಂದ್ರ ಸರ್ಕಾರದ, ರೈತರ ಕೃಷಿ ಆದಾಯವನ್ನು ದ್ವಿಗುಣಗೊಳಿಸುವ ಯೋಜನೆಗಳ ಅನುಷ್ಠಾನದ ಪ್ರಗತಿ, ರೈತರ ಆರ್ಥಿಕ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಉಂಟಾಗಿರುವ ಕುಂಠಿತವನ್ನು ಅಧ್ಯಯನ ನಡೆಸಲು ರಾಜ್ಯ ಸರ್ಕಾರ ತಜ್ಞರ ಸಮಿತಿಯನ್ನು ರಚಿಸಿದೆಯೇ; ಇಲ್ಲದಿದ್ದಲ್ಲಿ, ರಚಿಸಲು ಮುಂದಾಗುವುದೇ?

## ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಮಹಿಳಾ ವಿಶ್ರಾಂತಿ ಗೃಹಗಳ ನಿರ್ಮಾಣದ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೬೪ (೭೩೪) ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಸರ್ಕಾರಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಈ ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ವಿಶ್ರಾಂತಿ ಗೃಹಗಳನ್ನು ನಿರ್ಮಿಸಲಾಗಿದೆಯೇ;

(ಇ) ಇಲ್ಲವಾದಲ್ಲಿ, ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)

(ಈ) ಈ ಬಸ್ ನಿಲ್ದಾಣಗಳಲ್ಲಿ ಶೌಚಾಲಯಗಳ ಸಮರ್ಪಕ ನಿರ್ವಹಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

## ಹುದ್ದೆಗಳ ನೇಮಕಾತಿ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೫ (೭೭೪) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ವಿವಿಧ ವೃಂದದ ಹುದ್ದೆಗಳ ನೇಮಕಾತಿಗಾಗಿ ಆರ್ಥಿಕ ಇಲಾಖೆಯ ಅನುಮೋದನೆಗೆ ಪ್ರಸ್ತಾವನೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇನ್ನೂ ಆರ್ಥಿಕ ಇಲಾಖೆ ಅನುಮೋದನೆ ನೀಡದಿರಲು ಕಾರಣವೇನು; ಮತ್ತು ಸರ್ಕಾರ ಯಾವಾಗ ವಿವಿಧ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು?

## ಮುಖ್ಯಮಂತ್ರಿ ಸುವರ್ಣಗ್ರಾಮ ಮತ್ತು ಗ್ರಾಮ ವಿಕಾಸ ಯೋಜನೆಗಳ ಕುರಿತು

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೬೬ (೬೩೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮುಖ್ಯಮಂತ್ರಿ ಸುವರ್ಣ ಗ್ರಾಮ ಮತ್ತು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗಳಡಿ ಕಳೆದ ೮ ವರ್ಷಗಳಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಆಯ್ಕೆಯಾಗಿರುವ ಗ್ರಾಮಗಳು ಯಾವುವು; ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ರೂಪಿಸಿರುವ ಮಾನದಂಡಗಳೇನು; ಸದರಿ ಗ್ರಾಮಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಯೋಜನಾ ವರದಿ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ, ಆದೇಶ ಮತ್ತು ಯೋಜನಾ ವರದಿ ಸಹಿತ ಗ್ರಾಮವಾರು ವಿವರ ನೀಡುವುದು;

(ಆ) ಸದರಿ ಗ್ರಾಮಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳು ಯಾವ ಹಂತದಲ್ಲಿವೆ; ಈ ಕಾಮಗಾರಿಗಳಿಗಾಗಿ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು (ಕಾಮಗಾರಿವಾರು ಮತ್ತು ಗ್ರಾಮವಾರು ವಿವರ ಒದಗಿಸುವುದು)

(ಇ) ಈ ಯೋಜನೆಗಳಡಿ ಕೈಗೊಂಡಿರುವ ಹಲವಾರು ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇದ್ದರೂ ಕೂಡ ಕಾಮಗಾರಿಗಳನ್ನು ಮಾಡಲಾಗಿದೆ ಎಂದು ದಾಖಲೆಗಳನ್ನು ಸೃಷ್ಟಿಸಿ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು? (ಪ್ರಕರಣವಾರು ವಿವರ ನೀಡುವುದು)

## ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ ಕುರಿತು

**ಶ್ರೀ ಕೆ.ಸಿ ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೭ (೬೬೨) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಧಾನಮಂತ್ರಿಗಳ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಅಭಿಯಾನ ಅಡಿಯಲ್ಲಿ ಕರ್ನಾಟಕದಲ್ಲಿ ಗುರುತಿಸಲಾದ ಪಂಚಾಯಿತಿಗಳಾವುವು;

(ಆ) ಈ ಅಭಿಯಾನದಡಿ ಎಷ್ಟು ಮನೆಗಳನ್ನು ನೋಂದಾಯಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಎಲ್ಲಾ ನೋಂದಾಯಿತ ಮನೆಗಳಿಗೆ ತರಬೇತಿ ಮತ್ತು ಪ್ರಮಾಣಪತ್ರಗಳನ್ನು ನೀಡಲಾಗಿದೆಯೇ? (ಆಗಿರುವ ಪ್ರಗತಿಯ ವಿವರ ನೀಡುವುದು)

## ೨೦೨೦–೨೦೨೧ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮೀಸಲಿಟ್ಟಿರುವ ಅನುದಾನ ಎಷ್ಟು

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೮ (೭೯೨) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೨೦–೨೧ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಗೆ ಸಮಾಜ ಕಲ್ಯಾಣ ಇಲಾಖೆಯು ಮೀಸಲಿರಿಸಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಆ) ಇದೂವರೆಗೆ ಮಂಜೂರಾತಿಯಾಗಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಾಕಿ ಉಳಿದಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಇ) ಶಿವಮೊಗ್ಗ ಜಿಲ್ಲೆಗೆ ಮೀಸಲಿಟ್ಟಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ನೀಡುವುದು)

# BRC/CRCಗಳ ಸೇವೆಯನ್ನು ಮುಂದುವರೆಸುವ ಕುರಿತು

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

೬೯ (೭೮೨) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (NRDWP)ಯಡಿ ನೇಮಕಗೊಂಡಿದ್ದ BRC/CRC ಸಂಯೋಜಕರುಗಳ ಸೇವೆಯನ್ನು ಮುಂದುವರೆಸುವುದರಿಂದ ಸರ್ಕಾರಕ್ಕೆ ಆಗುವ ತೊಂದರೆಗಳೇನು; (ವಿವರವಾದ ಮಾಹಿತಿ ನೀಡುವುದು)

(ಆ) BRC/CRC ಸಂಯೋಜಕರುಗಳ ಸೇವೆಯನ್ನು ಮುಂದುವರಿಸಲು ಸರ್ಕಾರವು ೨ ಬಾರಿ ನಿರ್ದೇಶನ ನೀಡಿದ್ದರೂ ಕೂಡ ಅಧಿಕಾರಿಗಳು ಆದೇಶ ಮಾಡದಿರಲು ಕಾರಣಗಳೇನು;

(ಇ) ಈ ವಿಚಾರವು Policy Decisionಗೆ ಸಂಬಂಧಿಸಿದ್ದಲ್ಲಿ ಸಚಿವ ಸಂಪುಟದ ಮುಂದೆ ಮಂಡಿಸಿ ಅನುಮೋದನೆ ಪಡೆಯದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಇದಕ್ಕೆ ಸಚಿವ ಸಂಪುಟದಿಂದ ಅನುಮತಿ ಪಡೆಯಲಾಗುವುದು;

(ಈ) ಸಾವಿರಾರು ಪದವೀಧರ ಕುಟುಂಬಗಳಿಗೆ ಜೀವನ ಭದ್ರತೆ ನೀಡುವಂತಹ ಈ ಆದೇಶವನ್ನು ಸರ್ಕಾರ ಯಾವ ಕಾಲಮಿತಿಯಲ್ಲಿ ಜಾರಿ ಮಾಡಲಿದೆ;

(ಉ) ಕಡತ ಸಂಖ್ಯೆ:ಗ್ರಾಅಪ/೬೯/ಗ್ರಾನೀಸ(೨)/೨೦೧೫, ಈ ಕಡತದ ಟಿಪ್ಪಣಿ ಹಾಳೆಗಳೊಂದಿಗೆ ಯಥಾವತ್ತು ಪ್ರತಿಯನ್ನು ನೀಡುವುದು.

## ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೦ (೭೦೨) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; ಮತ್ತು ಯಾವುವು; ಹಾಗೂ ಅವುಗಳ ಸಾಮರ್ಥ್ಯವೆಷ್ಟು; ಸ್ವಂತ ಕಟ್ಟಡ ಹೊಂದಿರುವ ಹಾಸ್ಟೆಲ್ ಗಳೆಷ್ಟು ಮತ್ತು ಬಾಡಿಗೆ ಕಟ್ಟಡಗಳಲ್ಲಿರುವ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮತ್ತು ಹಾಸ್ಟೆಲ್‌ವಾರು ಮಾಹಿತಿ ನೀಡುವುದು)

(ಆ) ಮಂಡ್ಯ ಜಿಲ್ಲೆಯ ವ್ಯಾಪ್ತಿಯ ಪ್ರತಿ ಹಾಸ್ಟೆಲ್ ಗೆ ಕಳೆದೆರಡು ವರ್ಷಗಳಿಂದ ದಾಖಲಾತಿ ಕೋರಿ ಸ್ವೀಕೃತವಾಗಿರುವ ಅರ್ಜಿಗಳೆಷ್ಟು; ಇದರಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ದಾಖಲಾತಿ ನೀಡಲಾಗಿದೆ; (ತಾಲ್ಲೂಕುವಾರು ಮತ್ತು ಹಾಸ್ಟೆಲ್ ವಾರು ಮಾಹಿತಿ ನೀಡುವುದು) ಹಾಸ್ಟೆಲ್ ಸೀಟು ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಸರ್ಕಾರವು ಕಲ್ಪಿಸಿರುವ ಸೌಲಭ್ಯಗಳೇನು; (ವಿವರ ನೀಡುವುದು)

(ಇ) ಈ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಕಲ್ಪಿಸಿರುವ ಸೌಲಭ್ಯಗಳೇನು; ಖಾಸಗಿ ಕಟ್ಟಡಗಳಲ್ಲಿರುವ ಹಾಸ್ಟೆಲ್‌ಗಳ ಬದಲಿಗೆ ಸ್ವಂತ ಕಟ್ಟಡ ಹೊಂದಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

## ಬೆಂಗಳೂರಿನ ಹನುಮಂತ ನಗರದಲ್ಲಿರುವ ರಾಜೀವ್‌ಗಾಂಧಿ ಕ್ರೀಡಾಂಗಣದ ಮೂಲಸೌಕರ್ಯ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೭೧ (೨೨) ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ಹನುಮಂತ ನಗರದಲ್ಲಿರುವ ರಾಜೀವ್‌ಗಾಂಧಿ ಕ್ರೀಡಾಂಗಣಕ್ಕೆ ಮೂಲಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರಸಕ್ತ ಸಾಲಿನಲ್ಲಿ ಬೆಂಗಳೂರು ನಗರದ ಕ್ರೀಡಾಂಗಣಗಳ ಅಭಿವೃದ್ಧಿಗೆ ಮೀಸಲಿರಿಸಿರುವ ಅನುದಾನವೆಷ್ಟು; ಸದರಿ ರಾಜೀವ್‌ಗಾಂಧಿ ಕ್ರೀಡಾಂಗಣದ ಅಭಿವೃದ್ಧಿಗೆ ಸರ್ಕಾರ ಕಾರ್ಯ ಯೋಜನೆಯನ್ನು ಸಿದ್ದಪಡಿಸಿದೆಯೇ;

(ಇ) ಸಿದ್ಧಪಡಿಸಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಯೋಜನೆಯನ್ನು ಪ್ರಾರಂಭಿಸಲಾಗುವುದು?

## ಅಂಬೇಡ್ಕರ್, ಜಗಜೀವನರಾಂ ಮತ್ತು ವಾಲ್ಮೀಕಿ ಭವನಗಳ ನಿರ್ಮಾಣದ ಕುರಿತು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೨ (೭೨೧) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಂಬೇಡ್ಕರ್ ಭವನ, ಜಗಜೀವನರಾಂ ಭವನ ಮತ್ತು ವಾಲ್ಮೀಕಿ ಭವನಗಳು ನಿರ್ಮಾಣವಾಗದೆ ಬಾಕಿ ಉಳಿದಿದ್ದು, ಅವುಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;

(ಆ) ಅನುದಾನದ ಕೊರತೆಯಿಂದ ಅದರ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಕಾಮಗಾರಿಗಳನ್ನು ಪ್ರಾರಂಭಿಸುತ್ತೇವೆ ಎಂದು ಈ ಹಿಂದೆ ಸದನದಲ್ಲಿ ಭರವಸೆ ನೀಡಿದ್ದರೂ, ಇದೂವರೆವಿಗೂ ಕಾಮಗಾರಿಗಳನ್ನು ಕೈಗೊಳ್ಳದಿರಲು ಕಾರಣಗಳೇನು;

(ಇ) ವಿಶೇಷ ಅನುದಾನ ಮಂಜೂರು ಮಾಡಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

## ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯಿಂದ MA-RDPR ಪದವಿ ಕುರಿತು

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೭೩ (೭೯೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯಿಂದ MA-RDPR ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಮೀಸಲಾತಿ ಕಲ್ಪಿಸಿ ಸರ್ಕಾರ ಉದ್ಯೋಗ ಒದಗಿಸಲು ಚಿಂತನೆ ನಡೆಸಿದೆಯೇ;

(ಆ) ಹಾಗಿದ್ದಲ್ಲಿ, ಈ ಕುರಿತು ಉನ್ನತಮಟ್ಟದ ಸಮಿತಿಯು ರಚನೆ ಮಾಡಲಾಗಿದೆಯೇ; ಹೌದಾದಲ್ಲಿ, ಸಮಿತಿಯಲ್ಲಿರುವ ಸದಸ್ಯರ ಮಾಹಿತಿಯನ್ನು ನೀಡುವುದು;

(ಇ) ಉನ್ನತಮಟ್ಟದ ಸಮಿತಿಯು ರಚನೆಯಾಗಿದ್ದಲ್ಲಿ, ಎಷ್ಟು ಸಭೆಗಳನ್ನು ನಡೆಸಿದೆ ಮತ್ತು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ಕ್ರೈಸ್ ಅಧೀನದ ವಸತಿ ಶಾಲೆಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೭೪ (೭೯೧) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಅಧೀನದಲ್ಲಿ ಪ್ರಸ್ತುತ ಒಟ್ಟು ಎಷ್ಟು ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಅವುಗಳಲ್ಲಿ ಎಷ್ಟು ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ;

(ಇ) ಇನ್ನುಳಿದ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

(ಈ) ಯಾವ ಕಾಲಮಿತಿಯಲ್ಲಿ ಉಳಿದ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು?

## ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು (FPO) ತೆರೆಯುವ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೫ (೭೬೩) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ಸರ್ಕಾರದ "ಆತ್ಮ ನಿರ್ಭರದ ಭಾರತ" ಯೋಜನೆಯಡಿ ರಾಜ್ಯಕ್ಕೆ ಇದುವರೆಗೂ ಕೇಂದ್ರ ನೀಡಿದ ಅನುದಾನ ಎಷ್ಟು;

(ಆ) ಸಾವಯವ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಓ)ಗಳನ್ನು ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಈ ಬಗ್ಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ; (ಮಾಹಿತಿ ನೀಡುವುದು)

(ಈ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ತೆರೆಯಲು ಸ್ಥಳ ಗುರುತಿಸಲಾಗಿದೆ;

(ಉ) ರೈತ ಸಂಸ್ಥೆಗಳು ಆರಂಭದಲ್ಲೇ ಮುಚ್ಚುವ ಪರಿಸ್ಥಿತಿ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ5, ಕಾ.ಸೂ.333 , ಪ್ರತಿಗಳು 400

**List of Questions for Oral Answers**

**Total No. of Questions - 15**

# LIST - 05

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Friday, the 17th September, 2021

### GROUP - V

1. Minister for Transport and Scheduled Tribes Welfare
2. Minister for Rural Development and Panchayat Raj
3. Minister for Social Welfare and Backward Classes Welfare
4. Minister for Agriculture
5. Minister for Sericulture and Youth Empowerment and Sports
6. Minister for Horticulture and Planning, Programme Monitoring and Statistics

### VARIOUS SCHEMES OF AGRICULTURE DEPARTMENT

**Sri Sunil Vallyapur (Elected by Legislative Assembly) -**

61 (648) Will the Minister for Agriculture be pleased to state:-

a. the particulars of various schemes in Agriculture department; (details be furnished)

b. the grant released by the Government to these schemes for the last 3 years; (districtwise details be furnished)

c. the criteria which would be followed for selection of beneficiaries to these schemes; (details be furnished)

d. the number of beneficiaries who have been selected under these schemes in Kalaburagi district for the last 3 years;

(complete information of beneficiaries and alongwith their name be furnished)

e. the manner in which the publicity is being made by the Agriculture department for reaching the schemes to farmers? (information be furnished)

## SCHEMES OF THE AMBEDKAR DEVELOPMENT CORPORATION

**Sri B.K. Hariprasad (Elected by Legislative Assembly) -**

62 (687) Will the Minister for Social Welfare and Backward Classes Welfare be pleased to state:-

a. the complete list alongwith detailed statistics information of the beneficiaries who have received grant under Micro Credit Scheme, Direct Dairy Loan, Taxi Schemes in Ambedkar Development Corporation during the year 2019-20 and 2020-21 be furnished;

b. whether it is a fact that the allegation of corruption has been reported under these schemes; if so, the number of officers against whom the disciplinary action has been initiated? (complete information be furnished)

## DOUBLING OF FARMERS' INCOME SCHEME

**Sri K.A. Thippeswamy (Nominated) -**

63 (712) Will the Minister for Agriculture be pleased to state:-

a. the particulars of schemes of the Central Government which are being implemented under the Doubling of Farmers' Income (DFI) scheme in the State; (the complete details of the scheme outlines be furnished)

b. the details about the ratio in which subsidy, financial assistance and other facilities are available by the Central Government under these schemes to State Government; (complete details be furnished)

c. the particulars of schemes /programmes that have been set up for implementation of doubling farmers' income by 2022 in the Central and State level; (complete information be furnished)

d. whether the State Government has constituted a expert committee to study the poor development occurred while implementing the doubling farmers' income and farmers financial development schemes of the Central Government in the State; if not, whether it would constitute?

**CONSTRUCTION OF LADIES RESTROOMS IN GOVERNMENT BUS STANDS**

**Sri K.T.Srikantegowda (Graduates' Constituency) -**

64 (734) Will the Minister for Transport and Scheduled Tribes Welfare be pleased to state:-

a. the number of Government bus stands in the State; (details be furnished)

b. whether the ladies restrooms have been constructed in these bus stands;

c. if not, the steps taken by the Government to construct the same; (details be furnished)

d. the steps taken by the Government for proper maintenance of toilets in these bus stands? (details be furnished)

**RECRUITMENT OF POSTS**

**Sri Basavaraj Patil Itagi (Local Authorities Constituency) -**

65 (774) Will the Minister for Agriculture be pleased to state:-

a. whether it has come to the notice of the Government that the proposal for recruitment of posts in various cadres

in Dharwad Agricultural University is submitted before the Finance department for approval;

b. if so, the reason for not giving the approval by the Finance department and the date on which the Government would be recruited to the posts in various cadres?

## CHIEF MINISTER'S SUVARNA GRAM AND GRAM VIKAS YOJANA

**Sri M.A. Gopalaswamy (Local Authorities Constituency)** -

66 (638) Will the Minister for Rural Development and Panchayat Raj be pleased to state:-

a. the particulars of villages which are selected under the Chief Minister's Suvarna Gram and Gram Vikas Yojana in Channarayapattana taluk for the last 8 years; the yardsticks formulated by the Government for implementing the same; whether the planning report has been prepared about the developmental works to be undertaken in the said villages; if so, the details of order and the planning report alongwith villagewise be furnished;

b. the particulars of works undertaken in the said villages; the present stage of the works; the grant sanctioned and released to these works; out of which, the grant that has been released to the contractors; (workwise and villagewise details be furnished)

c. whether it has come to the notice of the Government that the bill is being paid to the contractors by creating records that works have been completed but in fact the various works which have been takenup under these schemes are not completed; if so, the measures taken in this regard? (casewise details be furnished)

## GRAMIN DIGITAL SAKSHARATA ABHIYAN

**Sri K.C.Kondaiah (Local Authorities Constituency) -**

67 (662) Will the Minister for Rural Development and Panchayat Raj be pleased to state:-

a. the particulars of Gram panchayats identified under Pradhan Mantri Digital Saksharata Abhiyan in Karnataka;

b. the number of houses registered under this Abhiyan; (districtwise information be furnished)

c. whether the training and certificates are given to all the registered houses? (details of the progress be furnished)

## GRANT EARMARKED BY THE SOCIAL WELFARE DEPARTMENT IN SCP/TSP SCHEME DURING THE YEAR 2020-21

**Sri R.Prasanna kumar (Local Authorities Constituency) -**

68 (792) Will the Minister for Social Welfare and Backward Classes Welfare be pleased to state:-

a. the grant earmarked by the Social Welfare department to SCP/TSP schemes during the year 2020-21; (details be furnished)

b. the grant that has been released after sanction to till date; the remaining grant; (details be furnished)

c. the grant which has earmarked to Shivamogga district? (complete details be furnished)

## CONTINUATION OF BRC/CRC SERVICE

**Sri Kantharaj (BML) (Local Authorities Constituency) -**

69 (782) Will the Minister for Rural Development and Panchayat Raj be pleased to state:-

a. the impediments to the Government by continuing the service of BRC and CRC co-ordinators who are appointed under the National Rural Drinking Water Programme (NRDWP); (the detailed information be furnished)

b. the reasons for not issuing an order by the officers even after the Government has given direction twice to continue the service of BRC/CRC co-ordinators;

c. if this issue is related to Policy Decision, the reasons for not obtaining the approval by submitting before the cabinet; the timelimit within which the approval would be obtained by the cabinet;

d. the timelimit within which the Government would be implemented this order which will give life security for thousands of graduates' families;

e. the copy of the original along with note sheets of the file No:Grapa/69/Graneesa (2)/2015 be furnished?

**HOSTELS OF SOCIAL WELFARE DEPARTMENT**

**Sri N. Appajigowda (Local Authorities Constituency) -**

70 (702) Will the Minister for Social Welfare and Backward Classes Welfare be pleased to state:-

a. the number of pre-metric and post-metric hostels which are working under the Social Welfare department in Mandya district; and the particulars thereof; and the strength thereof; the number of hostels which have own buildings and the number of hostels which are in rented buildings; (talukwise and hostelwise information be furnished)

b. the number of applications which have been received for the admission to each hostel for the last two years in the limits of Mandya district; out of which, the number of students to whom admission has given; (talukwise and hostelwise information be furnished) the facilities provided by the Government to the students who were not able to get seat in the hostel; (details be furnished)

c. the facilities provided to the students in the hostels; the measures taken by the Government to provide own buildings instead of hostels running in private buildings?

## BASIC FACILITIES OF RAJIV GANDHI STADIUM IN HANUMANTHA NAGAR OF BENGALURU

**Sri U.B. Venkatesh (Nominated) -**

71 (22) Will the Minister for Sericulture and Youth Empowerment and Sports be pleased to state:-

a. whether it has come to the notice of the Government that the lack of basic facilities in Rajiv Gandhi stadium which is located in Hanumantha nagar of Bengaluru ;

b. the grant earmarked to the development of the stadiums in the Bengaluru city in the current year; whether work plan has been prepared by the Government to the development of the said Rajiv Gandhi stadium;

c. if so, the timelimit within which this plan would be initiated?

## CONSTRUCTION OF AMBEDKAR JAGJIVAN RAM AND VALMIKI BHAVANS

**Sri R. Dharmasena (Local Authorities Constituency) -**

72 (721) Will the Minister for Social Welfare and Backward Classes Welfare be pleased to state:-

a. the Ambedkar Bhavan, Jagjivan Ram Bhavan and Valmiki Bhavans are pending without construction in Mysuru and Chamarajanagar districts and the timelimit within which the same would be completed;

b. the assurance has given in the last session that the works will be commenced step by step on the basis of availability of the grant, the reasons for not undertaking the works till date;

c. whether the step that would be taken by the Government to complete the said works by sanctioning special grant?

## M.A. IN RDPR DEGREE FROM KARNATAKA STATE RURAL DEVELOPMENT AND PANCHAYAT RAJ UNIVERSITY

**Sri S.V. Sankanur (Graduates' Constituency) -**

73 (798) Will the Minister for Rural Development and Panchayat Raj be pleased to state:-

a. whether the Government has contemplated to provide job by providing reservation in the department of Rural Development and Panchayat Raj for the students who pursued the post graduate degree, M.A in RDPR from Karnataka State Rural Development and Panchayat Raj University;

b. if so, whether the high level committee has been constituted in this regard; if so, the information of the members of the committee be furnished;

c. if the high level committee has been constituted, the number of meetings conducted and whether the report has been submitted to the Government? (the complete information be furnished)

## RESIDENTIAL SCHOOLS UNDER KREIS

**Sri Nirani Hanamant Rudrappa (Graduates' Constituency) -**

74 (791) Will the Minister for Social Welfare and Backward Classes Welfare be pleased to state:-

a. the total number of residential schools are running under Karnataka Residential Educational Institutions Society (KREIS) of the Social Welfare department at present; (talukwise information be furnished)

b. out of which, the number of schools have own buildings;

c. the reasons for the delay in construction of the own buildings for remaining residential schools;

d. the timelimit within which the own buildings would be provided to the remaining residential schools?

## OPENING OF FARMER PRODUCERS ORGANISATION (FPO) IN THE STATE

**Sri M. Narayanaswamy (Local Authorities Constituency) -**

75 (763) Will the Minister for Agriculture be pleased to state:-

a. the grant released by the Central Government to the State under the "Atma Nirbhar Bharat Yojana" of the Central Government;

b. the steps taken by the Government to open the organic Farmer Producers Organisation (FPO);

c. whether action plan has been prepared in this regard; (information be furnished)

d. the particulars of the places in which the land has been identified to open the farmer producer organisations in the State;

e. whether it has come to the notice of the Government that the farmer organisations will be going to shutdown in the beginning stage itself; the steps taken by the Government to develop the same?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 333 - 750 Copies